ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

(ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

**Visvesvaraya Technological University**

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

**Prof. B. E. Rangaswamy, Ph.D.**
**Registrar**

**Phone : (0831) 2498100**
**Fax : (0831) 2405467**

**Ref. No.: VTU/PS/2024-25/376** **Date:** 27 MAY 2025

**CIRCULAR**

Sub: Curtailing the unwanted activities in the campuses – reg.
Ref: Letter from the Principal Secretary, Department of Higher Education, GoK dated 19th May 2025.

With reference to the above, Principal Secretary, Department of Higher Education, GoK through the letter dated 19th May 2025 has directed the University to instruct the colleges to install CCTV at College campuses to prevent unwanted activities like, Consuming Drugs, Ragging, Sexual harassment etc. In order to protect the interest of the students and also to refrain them from involving in such anti-social activities,

- Conduct a special seminar for the students against the anti-social activities and its repercussions.
- The colleges must install CCTV at prominent places and regularly monitor the activities of the students.
- A councilor must be appointed to council the students who are victim of anti- social activities.
- Display boards must be installed in all the prominent places of the institute stating that, **"Consuming Drugs, Alcohol, Tobacco, involving in Ragging and Sexual harassment and other anti-social activities is strictly prohibited",** Involving in such anti-social activities will be considered as **act of punishable offence** under the appropriate law

In the case of finding such activities, colleges must take stringent action and a report must be submitted to the office of the undersigned.
Instruction issued by the Principal Secretary, Department of Higher Education, GoK through the letter dated 19th May 2025, are enclosed for strict compliance.

Sd/
**REGISTRAR**

To,

1. The Principals of Constituent, Affiliated and Autonomous Engg. Colleges.
2. The Chairpersons and Program Coordinators of VTU Departments are informed to conduct awareness program for the students on the above instructions.

Copy FWCs to:

1. Hon'ble Vic-Chancellor, VTU Belagavi through the Sec. to VC, VTU Belagavi, for information.
2. The Incharge Regional Directors of VTU Regional Offices, for information.

27/05/25

**REGISTRAR**

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 139 ವಿವಿಧ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 06ನೇ ಮಹಡಿ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:19.05.2025.

**ಇವರಿಂದ:**

ಸರ್ಕಾರದ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು-560001.

**ಇವರಿಗೆ:**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-01.
2. ನಿರ್ದೇಶಕರು (ಕಾಲೇಜು ಶಿಕ್ಷಣ), ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ಅರಮನೆ ರಸ್ತೆ, ಬೆಂಗಳೂರು-560001.
3. ನಿರ್ದೇಶಕರು (ತಾಂತ್ರಿಕ ಶಿಕ್ಷಣ), ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ, ಅರಮನೆ ರಸ್ತೆ, ಬೆಂಗಳೂರು-560001.
4. ಕರ್ನಾಟಕ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಸಚಿವರು/ ಕುಲಪತಿಗಳು.

**ಮಾನ್ಯರೇ,**

**ವಿಷಯ:** Install all education intuitions from preschools up to all colleges including universities whether it may be Pvt, Aided & Government schools including Government offices as recently Lokayukta found drugs in Bangalore.

**ಉಲ್ಲೇಖ:** Sree Bramhananda Kasi, Bangalore-560113 ರವರ ಮನವಿ, ದಿನಾಂಕ: 10.02.2025.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮನವಿದಾರರು ಮಾನ್ಯ ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಸಲ್ಲಿಸಿರುವ ಮನವಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಮನವಿಯಲ್ಲಿ ಇತ್ತೀಚೆಗೆ ರಾಜ್ಯದ ಶಾಲಾಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾದಕದ್ರವ್ಯಗಳ ವ್ಯಸನಕ್ಕೆ ತುತ್ತಾಗುವುದು, ರ್‍ಯಾಗಿಂಗ್‌ಗೆ ಹಾಗೂ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗುವುದು, ಇನ್ನಿತರ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಗಳಾಗುವುದು ಕಂಡುಬರುತ್ತಿರುವುದರಿಂದ ಈ ಎಲ್ಲಾ ಅಕ್ರಮ/ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸಲು ಅನುವಾಗುವಂತೆ ಹಾಗೂ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದ ಎಲ್ಲಾ ಶಾಲಾಕಾಲೇಜುಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸುವಂತೆ ಕೋರಿರುತ್ತಾರೆ.

..2

ಇತ್ತೀಚೆಗೆ ಲೋಕಾಯುಕ್ತರು ಬೆಂಗಳೂರಿನಲ್ಲಿ ಮಾದಕ ದ್ರವ್ಯಗಳನ್ನು ಪತ್ತೆ ಹಚ್ಚಿದ ವಿಷಯ ದಿನಪತ್ರಿಕೆಗಳಲ್ಲಿ ವರದಿಯಾಗಿರುವ ಕಾರಣ ಅರ್ಜಿದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು/ಸರ್ಕಾರಿ/ಅನುದಾನಿತ/ಖಾಸಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಸಿಸಿಟಿವಿಗಳನ್ನು ಸ್ಥಾಪಿಸುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಮಂಜುನಾಥ.ಕೆ) 19/5/25
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯ-2 & ಸಾಮಾನ್ಯ-2).

19/5/25

**ಪ್ರತಿ: ಮಾಹಿತಿಗಾಗಿ.**

1. ಸರ್ಕಾರದ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, 06ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. Sree Bramhananda Kasi, #14, 2nd Floor, 'Sai Krupa' 1st cross, Near SBI and HDFC Banks, Horamavu, Amar Regency Layount, Bangalore-560113.

10-02-2025

From ,

Sree Bramhananda Kasi

# 14 , 2 nd Floor,

' Sai Krupa ',

1 St ~~floor,~~ Cross

Near SBI and HDFC Banks, Horamavu,

Amar Regency Layout,

Bangalore - 560113.

Mob : - 9844556296

To,

The Chief Secretary,

Office of Chief Secretary,

No. 320, 3rdfloor, Vidhanasoudha, Bangalore-01

Dear Sir ,

I am a Self Master of healing & Spiritual Pendulum Dowser also. I have deep Concern in the Indian Society especially in the field of education & government offices .

Recently I gone through the medias where it's mentioned that education intuitions & government offices were influenced by drugs which is highly worry some .Even unmatured in the age of 12-16 Years aged fall in love & pregnant also which is highly worrying some. Even in Police Stations & investigation agencies ,CCTVs installation is mandatory & monitored as per Supreme Court directions.

'Foot Frints ' is a pre-school in Bangalore is the model as they installed CCTV Cameras & they are monitored through' AAP' by parents & guardians which effectively changes the school atmosphere.

I recommend to install all education intuitions from preschools up to all colleges including universities whether it may be Pvt ,Aided & Government schools including Government offices as recently Lokayukta found drugs in Bangalore.

Please consider my request in the interest of society to initiative for implementation.

Thanking You.

Awaiting Your Reply.

With Regards,

Sree Bramhanda Kasi

Sree Bramhananda Kasi

9844556296

14/2/25

15/2/25

**ಕರ್ನಾಟಕ ಸರ್ಕಾರ**
**ಪೊಲೀಸ್ ಇಲಾಖೆ**

ಸಂಖ್ಯೆ: 18/State-NCORD/meeting/CID/2024

ಪೊಲೀಸ್ ಮಹಾನಿರ್ದೇಶಕರ ಕಛೇರಿ,
ಎ.ಎನ್.ಟಿ.ಎಫ್ ಮುಖ್ಯಸ್ಥರು ಹಾಗೂ
ಸೈಬರ್ ಅಪರಾಧಗಳು ಮತ್ತು ಮಾದಕ ವಸ್ತು,
ಸಿಐಡಿ, ಬೆಂಗಳೂರು
ದಿನಾಂಕ: 11.03.2025

ರವರಿಗೆ,
ಕಾರ್ಯದರ್ಶಿಗಳು,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
ಮತ್ತು ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ಶಾಲಾ ಕಾಲೇಜುಗಳಲ್ಲಿ ಮಾದಕ ವಸ್ತುಗಳ ಬಳಕೆ ಹಾಗೂ ಅದರ ದುಷ್ಪರಿಣಾಮಗಳ ಕುರಿತು ಇವು ಕಾನೂನು ಬಾಹಿರ ಹಾಗೂ ಶಿಕ್ಷಾರ್ಹ ಅಪರಾಧವೆಂದು ಸೂಚಿಸುವ ಸೂಚನಾ/ಎಚ್ಚರಿಕೆ ಫಲಕವನ್ನು ಅಳವಡಿಸುವ ಕುರಿತು.

ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಸಮ್ಮುಖದಲ್ಲಿ ನಡೆದ ಸಭೆಯ ನಡವಳಿಯ ದಿನಾಂಕ : 13.02.2025.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ:13.02.2025 ರಂದು ಮಾನ್ಯ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ State Narco Coordination Centre (NCORD) ಸಭೆಯನ್ನು ನಡೆಸಿದ್ದು, ಸದರಿ ಸಭೆಯಲ್ಲಿ ಮಾನ್ಯರು ಶಾಲಾ ಕಾಲೇಜುಗಳ ಒಳ ಹಾಗೂ ಹೊರ ಆವರಣದಲ್ಲಿ ಮಾದಕ ವಸ್ತುಗಳ ಬಳಕೆ ಹಾಗೂ ಅದರ ದುಷ್ಪರಿಣಾಮಗಳ ಕುರಿತು ಇವು ಕಾನೂನು ಬಾಹಿರ ಹಾಗೂ ಶಿಕ್ಷಾರ್ಹ ಅಪರಾಧವೆಂದು ಸೂಚಿಸುವ ಸೂಚನಾ/ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಸೂಚಿಸಿರುತ್ತಾರೆ.

Gen A
14/3

ಅದರಂತೆ ಶಾಲಾ ಕಾಲೇಜುಗಳ ಒಳ ಹಾಗೂ ಹೊರ ಆವರಣದಲ್ಲಿ ಮಾದಕ ವಸ್ತುಗಳ ಬಳಕೆ ಹಾಗೂ ಅದರ ದುಷ್ಪರಿಣಾಮಗಳ ಕುರಿತು ಇವು ಕಾನೂನು ಬಾಹಿರ ಹಾಗೂ ಶಿಕ್ಷಾರ್ಹ ಅಪರಾಧವೆಂದು ಬಿಂಬಿಸುವ ಸೂಚನಾ/ಎಚ್ಚರಿಕೆ ಫಲಕಗಳನ್ನು ಅಳವಡಿಸಲು, ಸದರಿ ಫಲಕವು ವಾಟರ್ ಪ್ರೂಫ್ ಆಗಿರಬೇಕಲ್ಲದೆ ವೀಕ್ಷಕರಿಗೆ ದೂರದಿಂದ ಸ್ಪಷ್ಟವಾಗಿ ಗೋಚರಿಸುವಂತಿರಬೇಕು. ಅದರ ಅಳತೆ 90 * 65 ಇಂಚುಗಳಾಗಿದ್ದು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿನ ಸೂಚನೆಗಳನ್ನು ಒಂದೇ ಫಲಕದಲ್ಲಿ ನಮೂದಿಸತಕ್ಕದ್ದು ಹಾಗೂ ಸದರಿ ಫಲಕ ದೀರ್ಘಕಾಲ ಬಾಳಿಕೆ ಬರುವಂತಿದ್ದು ಉತ್ತಮ ಗುಣಮಟ್ಟದ ವಸ್ತುವಿನದ್ದಾಗಿರಬೇಕು.

ಈ ಸಂಬಂಧ ಶಾಲಾ ಕಾಲೇಜುಗಳ ಒಳ ಹಾಗೂ ಹೊರ ಆವರಣದಲ್ಲಿ ಸದರಿ ಫಲಕವನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

Pronab Mohanty 11/3/25

(ಡಾ॥ ಪ್ರಣವ ಮಹಾಂತಿ, ಐಪಿಎಸ್)
ಪೊಲೀಸ್ ಮಹಾ ನಿರ್ದೇಶಕರು,
ಎ.ಎನ್.ಟಿ.ಎಫ್ ಮುಖ್ಯಸ್ಥರು,
NCORD ನೋಡಲ್ ಅಧಿಕಾರಿ ಹಾಗೂ
ಸೈಬರ್ ಅಪರಾಧಗಳು ಮತ್ತು ಮಾದಕ ವಸ್ತು
ಸಿಐಡಿ, ಬೆಂಗಳೂರು.

## ಮಾದಕ ವಸ್ತು ಮತ್ತು ನಿದ್ರಾಜನ್ಯ ಪದಾರ್ಥಗಳ (ಎನ್‌ಡಿಪಿಎಸ್) ಕಾಯ್ದೆ, 1985 ರ ಅಡಿಯಲ್ಲಿ ಈ ಕೆಳಕಂಡ ಅನೈತಿಕ ಚಟುವಟಿಕೆಗಳು ಕಾನೂನಾತ್ಮಕ ಶಿಕ್ಷಾರ್ಹ ಅಪರಾಧವಾಗಿದೆ

1. ಮಾದಕ ವಸ್ತುವನ್ನು ವೈಯಕ್ತಿಕ ಬಳಕೆಗಾಗಿ ಸಣ್ಣ ಪ್ರಮಾಣದಲ್ಲಿ ಹೊಂದಿರುವುದೂ ಅಪರಾಧವಾಗಿದೆ. ಮತ್ತು 1 ವರ್ಷದವರೆಗೆ ಶಿಕ್ಷೆಯನ್ನು ವಿಧಿಸಲಾಗುತ್ತದೆ.

2. ಮಾದಕ ಬೆಳೆಯ ಸಾಗುವಳಿ, ಮಾದಕ ವಸ್ತುಗಳ ಅಕ್ರಮ ತಯಾರಿಕೆ, ಮಾರಾಟ, ಖರೀದಿ ಮತ್ತು ಸಾಗಣೆ ಅಪರಾಧವಾಗಿದೆ.

3. ಮಾದಕ ದ್ರವ್ಯಗಳ ಅಕ್ರಮ ಸಾಗಾಟವು ಜಾಮೀನು ರಹಿತ ಅಪರಾಧವಾಗಿದೆ ಮತ್ತು 20 ವರ್ಷಗಳವರೆಗೆ ಕಠಿಣ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಲಾಗುತ್ತದೆ.

4. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಡ್ರಗ್ಸ್ ವ್ಯವಹಾರದಲ್ಲಿ ತೊಡಗಿಸಿಕೊಂಡರೆ ಕಠಿಣ ಶಿಕ್ಷೆಯನ್ನು ವಿಧಿಸುತ್ತದೆ.

5. ಪುನರಾವರ್ತಿತ ಅಪರಾಧಿಗಳಿಗೆ ಮರಣದಂಡನೆ ವಿಧಿಸಬಹುದಾಗಿದೆ.

## Under Narcotics Drugs and Psychotropic substances (NDPS) Act, 1985, the following illegal activities attract penalties

1. Consumption of Narcotics Drugs even in small quantity for personal use is an offence and punishable up to 1 year imprisonment.
2. cultivation of Drug plant Illicit Manufacture, Possession, Sale, Purchase and transportation of Drugs is an offence.
3. Illegal Trafficking of Narcotics / Psychotropic Drugs is a non-bailable offence and attracts rigorous imprisonment upto 20 years and fine.
4. Involving in Drug Business either directly or indirectly attracts severe punishment.
5. Death Penalty can be imposed for repeat offenders.

**ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ The State Level Narco Coordination Centre (NCORD) Mechanism Committee ಕುರಿತಂತೆ ದಿನಾಂಕ: 13.02.2025 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸಭೆಯ ನಡವಳಿಗಳು.**

ಹಾಜರಿದ್ದ ಅಧಿಕಾರಿಗಳು: ಪಟ್ಟಿ ಲಗತ್ತಿಸಿದೆ.

ಸಭೆಗೆ ಹಾಜರಿದ್ದ ಅಧ್ಯಕ್ಷರು ಹಾಗೂ ಅಧಿಕಾರಿಗಳನ್ನು ಪೋಲೀಸ್ ಮಹಾ ನಿರ್ದೇಶಕರು, ಸೈಬರ್ ಅಪರಾಧಗಳು ಮತ್ತು ಮಾದಕ ದ್ರವ್ಯ, ಸಿಐಡಿ ಇವರು ಸ್ವಾಗತಿಸಿದರು.

ಮಾದಕ ದ್ರವ್ಯದ ಹಾವಳಿ ನಿಯಂತ್ರಣ ಕುರಿತು ದಿನಾಂಕ: 18.09.2024 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಮತ್ತು ದಿನಾಂಕ: 26.09.2024 ರಂದು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಆರು ಸಚಿವರ ಉನ್ನತ ಕಾರ್ಯಪಡೆಯ ಸಭೆ ಹಾಗೂ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ದಿನಾಂಕ: 10.09.2024 ರಂದು ನಡೆದ ರಾಜ್ಯ ಮಟ್ಟದ ನಾರ್ಕೋ ಸಮನ್ವಯ ಮೆಕ್ಯಾನಿಸಂ (NCORD) ಸಮಿತಿ ಸಭೆಗಳಲ್ಲಿ ನೀಡಿರುವ ನಿರ್ದೇಶನಗಳನ್ವಯ ಕೈಗೊಂಡಿರುವ ಕ್ರಮದ ವರದಿಯನ್ನು (ATR) ಪಡೆಯಲಾಗಿತ್ತು. ಅವುಗಳ ಪೈಕಿ ಕೆಲವು ಇನ್ನೂ ಕಾರ್ಯಗತವಾಗಿಲ್ಲದಿರುವುದನ್ನು ಸಭೆಯಲ್ಲಿ ಗಮನಿಸಿ, ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಯಿತು.

1. ಡ್ರಗ್ಸ್ ಹಾವಳಿಯನ್ನು ವಿವಿಧ ಆಯಾಮಗಳಿಂದ ಅಭ್ಯಸಿಸಲು ಪೋಲೀಸರು ಮ್ಯಾಟ್ರಿಕ್ಸ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಹಾಗೂ ಹೆಚ್ಚು ವಾಸ್ತವಿಕ ಮತ್ತು ಪ್ರಮಾಣೀಕರಿಸಬಹುದಾದ ಮೌಲ್ಯ ಮಾಪನಕ್ಕಾಗಿ ಕಳೆದ 3 ವರ್ಷಗಳಲ್ಲಿ ಸಂಭವಿಸಿರುವ ಅಂಕಿ-ಅಂಶಗಳನ್ವಯ ಮೂವಿಂಗ್ ವಿಂಡೋ ಕಾರ್ಯವನ್ನು(moving window) ಆಧರಿಸಿ ಮ್ಯಾಟ್ರಿಕ್ಸ್ ಅನ್ನು ವಿನ್ಯಾಸಗೊಳಿಸುವ ಬಗ್ಗೆ 02 ದಿನದಲ್ಲಿ ಪೂರ್ಣಗೊಳಿಸಿ, ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

(ಕ್ರಮ: ಡಿ.ಜಿ.ಪಿ. (ಸಿ&ಎನ್) ಮತ್ತು ಪಿಸಿಡಬ್ಲ್ಯೂ)

2. ಅಕ್ರಮ ಮಾದಕ ಬೆಳೆ ಗುರುತಿಸಲು ಮ್ಯಾಪ್-ಡ್ರಗ್ಸ್ ಅಪ್ಲಿಕೇಷನ್ ಕುರಿತು ಇಲ್ಲಿಯವರೆವಿಗೂ ಎಷ್ಟು ಜನಕ್ಕೆ ತರಬೇತಿ ನೀಡಲಾಗಿದೆ ಮತ್ತು ಇದರಿಂದಾಗಿರುವ ಪರಿಣಾಮಗಳ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

(ಕ್ರಮ: ಡಿ.ಜಿ.ಪಿ. (ಸಿ&ಎನ್))

3. ಡ್ರಗ್ಸ್ ಮುಕ್ತ ಕರ್ನಾಟಕ ಆ್ಯಪ್ ಬಗ್ಗೆ ವ್ಯಾಪಕ ಅಭಿಯಾನದ ರೂಪದಲ್ಲಿ ಉತ್ತೇಜನ ನೀಡಲು ಹಾಗೂ ತಂಬಾಕು ಅಭಿಯಾನದಲ್ಲಿರುವಂತೆಯೇ ಗ್ರಾಫಿಕ್ ಎಚ್ಚರಿಕೆಗಳನ್ನು ಒಳಗೊಂಡಂತೆ ಇದರಲ್ಲೂ ಹೆಚ್ಚು ಗೋಚರವಾಗುವಂತೆ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು. ಇದಕ್ಕೆ ಪ್ರತ್ಯೇಕ ಬಜೆಟ್‌ಗೆ ಪ್ರಸ್ತಾವನೆ ಸಲ್ಲಿಸುವುದು.

(ಕ್ರಮ: ಡಿ.ಜಿ.ಪಿ. (ಸಿ&ಎನ್))

4. ಅಕ್ರಮ ಮಾದಕ ಪದಾರ್ಥಗಳ ಪೂರೈಕೆಯನ್ನು ಕಡಿಮೆ ಮಾಡಲು ತೆಗೆದುಕೊಳ್ಳಲಾಗುತ್ತಿರುವ ಕಾರ್ಯತಂತ್ರಗಳ ಆಧಾರದಲ್ಲಿ ಆಂತರಿಕ ಗುರಿಯನ್ನು ನಿಗದಿಪಡಿಸಿ ಜಿಲ್ಲೆಗಳಿಂದ ಪ್ರತಿ ತಿಂಗಳ ಪ್ರಗತಿಯನ್ನು ಪಡೆದು ಮಂಡಿಸಲು ಕ್ರಮ ಕೈಗೊಳ್ಳುವುದು.

**(ಕ್ರಮ: ಡಿ.ಜಿ.ಪಿ. (ಸಿ&ಎನ್))**

5. ಅಪರಾಧಗಳನ್ನು ತಡೆಗಟ್ಟಲು ಮತ್ತು ಪುನರಾವರ್ತಿತ ಅಪರಾಧಿಗಳ ಮೇಲೆ ಕ್ರಮ ಕೈಗೊಳ್ಳಲು ಕಾರ್ಯವಿಧಾನಗಳನ್ನು ರೂಪಿಸುವ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರು SOP ರಚಿಸುವ ಕುರಿತು ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ಹಾಗೂ ಇದಕ್ಕೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಡಿ.ಜಿ.ಪಿ., ಸಿ&ಎನ್ ರವರು ಅ.ಮು.ಕಾ., ಒಳಾಡಳಿತ ಇಲಾಖೆ ರವರಿಗೆ ಒದಗಿಸುವುದು.

**(ಕ್ರಮ: ಅ.ಮು.ಕಾ, ಒಳಾಡಳಿತ ಇಲಾಖೆ & ಡಿ.ಜಿ.ಪಿ. (ಸಿ&ಎನ್))**

6. ಕೇಂದ್ರ ಸರ್ಕಾರವು ಮಾದಕ ವಸ್ತು ವಿರೋಧಿ ANTF ಕಾರ್ಯಪಡೆ ಸ್ಥಾಪನೆಗೆ ಒತ್ತು ನೀಡುತ್ತಿದ್ದು, ಮಾದಕ ವಸ್ತುಗಳ ಹಾವಳಿ ತಡೆಗಟ್ಟುವಲ್ಲಿ ಜಾರಿ ಚಟುವಟಿಕೆಗಳನ್ನು ಸಂಘಟಿಸಲು ಎನ್‌ಸಿಬಿಯ ಸಮನ್ವಯತೆಯೊಂದಿಗೆ ಕರ್ನಾಟಕದಲ್ಲಿ ಮಾದಕ ವಸ್ತು ವಿರೋಧಿ ಕಾರ್ಯಪಡೆ ಸ್ಥಾಪಿಸುವ ಕುರಿತು ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರು ಕೂಡಲೇ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವುದು ಹಾಗೂ ಮುಂಬರುವ ಬಜೆಟ್ ನಲ್ಲಿ ಸೇರಿಸಲು ಕ್ರಮವಹಿಸುವುದು.

**(ಕ್ರಮ: ಅ.ಮು.ಕಾ, ಒಳಾಡಳಿತ ಇಲಾಖೆ)**

7. ಮಾದಕ ವಸ್ತು ಸಂಬಂಧಿತ ಪ್ರಕರಣಗಳ ಸಕಾಲಿಕ ವಿಲೇವಾರಿಗಾಗಿ ಸೀಮಿತ ಸಂಖ್ಯೆಯಲ್ಲಿರುವ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯಗಳನ್ನು ಹೆಚ್ಚಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ಹೆಚ್ಚಿನ ಮಾಹಿತಿಯನ್ನು ಕೂಡಲೇ ಡಿ.ಜಿ.ಪಿ., ಸಿ&ಎನ್ ರವರು ಅ.ಮು.ಕಾ, ಒಳಾಡಳಿತ ಇಲಾಖೆಗೆ ಸಲ್ಲಿಸುವುದು.

**(ಕ್ರಮ: ಅ.ಮು.ಕಾ., ಒಳಾಡಳಿತ ಇಲಾಖೆ ಮತ್ತು ಡಿಜಿಪಿ.(ಸಿ&ಎನ್))**

8. ಹೆಚ್ಚಿನ ಆದಾಯದ ಅವಕಾಶಗಳು ಮತ್ತು ಅಕ್ರಮ ಮಾದಕ ಬೆಳೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದಾಗಿರುವುದರಿಂದ ಮಾದಕ ಪದಾರ್ಥಗಳ ಅಕ್ರಮ ಕೃಷಿಯ ಬದಲಾಗಿ ಅಧಿಕ ಲಾಭದಾಯಕವಾದ ತೋಟಗಾರಿಕೆ/ ರೇಷ್ಮೆಯಂತಹ ಪರ್ಯಾಯ ಬೆಳೆಗಳನ್ನು ಉತ್ತೇಜಿಸುವ ಬಗ್ಗೆ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ಪರ್ಯಾಯ ಬೆಳೆಗಳ ಬಗ್ಗೆ ಜನರಲ್ಲಿ ಮಾಹಿತಿಯನ್ನು ನೀಡಿ ಪರ್ಯಾಯ ಬೆಳೆಗಳಿಗೆ ಸಹಾಯಧನ ನೀಡಲು ಕ್ರಮ ಕೈಗೊಳ್ಳುವುದು. ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು.

**(ಕ್ರಮ: ಅ.ಮು.ಕಾ ಮತ್ತು ಅಭಿವೃದ್ಧಿ ಆಯುಕ್ತರು)**

9. ಆರೋಪಿಗಳನ್ನು ಪತ್ತೆ ಹಚ್ಚಲು ಮತ್ತು ಅಪರಾಧ ಚಟುವಟಿಕೆಗಳ ಮೇಲೆ ನಿಗಾವಹಿಸಲು ಪುನರಾವರ್ತಿತ ಅಪರಾಧಿಗಳಾಗಿರುವ ಬಂಧಿತರಿಗೆ ಅನ್ವಯವಾಗುವ MANAS ಪೋರ್ಟಲ್, ICJS ಪೋರ್ಟಲ್, (ICJS 2.0) ಪೋರ್ಟಲ್‌ಗಳಲ್ಲಿ ಕರ್ನಾಟಕಕ್ಕೆ



ile No. ED/118/VVD/2025-ED_SO_GEN2-EDUCATION HIGHER SEC (Computer No. 1766111)

ಸಂಬಂಧಿಸಿದ ಎಲ್ಲಾ ಕುಂದುಕೊರತೆಗಳು ಮತ್ತು ಸಂಬಂಧಿತ ಮಾಹಿತಿಯನ್ನು ನಿಭಾಯಿಸುವ ಕುರಿತು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ಮಾಹಿತಿ ನೀಡುವುದು ಹಾಗೂ ತತ್ಸಂಬಂಧ ನಿರ್ದೇಶಕರು, ನಿಮ್ಹಾನ್ಸ್ ರವರಿಗೆ ಪತ್ರ ಬರೆಯುವುದು.

(ಕ್ರಮ: ಡಿ.ಜಿ.ಪಿ. (ಸಿ&ಎನ್) & ನಿರ್ದೇಶಕರು, ನಿಮ್ಹಾನ್ಸ್)

10. ವಿಮಾನ ಮೂಲಕ ಮಾದಕ ವಸ್ತುವಿನ ಕಳ್ಳ ಸಾಗಾಣಿಕೆ ಸಮಸ್ಯೆ ಪರಿಹರಿಸುವ ತುರ್ತು ಭದ್ರತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ ಮಾಹಿತಿ ಒದಗಿಸಿ ತತ್ಸಂಬಂಧ ಏರ್‌ಪೋರ್ಟ್ ಕಸ್ಟಮ್ ಅಧಿಕಾರಿಗಳಿಗೆ ಪತ್ರ ಬರೆಯುವುದು.

(ಕ್ರಮ: ಡಿ.ಜಿ.ಪಿ. (ಸಿ&ಎನ್))

11. ವೈದ್ಯಕೀಯ ಬಳಕೆಗಾಗಿ ಪೂರ್ವಾನುಮತಿಯಿಲ್ಲದ ಅಕ್ರಮ ಮಾದಕ ಔಷಧಿಗಳನ್ನು ಉತ್ಪಾದಿಸುವ ಹಾಗೂ ಮಾರಾಟ ಮಾಡಲು ತೆರೆಯಲಾದ ನೋಂದಾಯಿಸದ/ಪರವಾನಿಗೆ ಇಲ್ಲದ ತಯಾರಿಕಾ ಕಂಪನಿ ಮತ್ತು ಔಷಧಾಲಯಗಳನ್ನು ಗುರುತಿಸುವಿಕೆಯಲ್ಲಿ ಈವರೆವಿಗೂ ಔಷಧ ನಿಯಂತ್ರಣ ಇಲಾಖೆಯು ದಾಖಲಿಸುವ ಎಫ್.ಐ.ಆರ್ ಮಾಹಿತಿಯನ್ನು ಡಿ.ಜಿ.ಪಿ. ಸಿ&ಎನ್ ರವರೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ಕಂಪನಿ ಮತ್ತು ಔಷಧಾಲಯಗಳ ಮಾಹಿತಿಯನ್ನು ಇಂಟಿಗ್ರೇಟ್ ಮಾಡಲು ಅಗತ್ಯವಿರುವ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಿ, 04 ವಾರದೊಳಗೆ ಮುಖ್ಯಕಾರ್ಯದರ್ಶಿಯವರಿಗೆ ಪ್ರಾತ್ಯಕ್ಷಿಕೆ ತೋರಿಸುವುದು.

(ಕ್ರಮ: ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ)

12. ಕಫ ಹಾಗೂ ನೋವುನಿವಾರಕ ಗಳನ್ನು ಔಷಧಿ ರೂಪದಲ್ಲಿ ವೈದ್ಯರು ಚೀಟಿ ಇಲ್ಲದೆ ನೀಡಲಾಗುವುದನ್ನು ತಡೆಗಟ್ಟಲು ಅಂತಹ ಔಷಧಿಗಳನ್ನು Red-flag ಮಾಡಿ, ನಿಯಂತ್ರಿಸಲು ಕ್ರಮ ಕೈಗೊಳ್ಳುವುದು.

(ಕ್ರಮ: ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ)

13. ದಾಖಲೆಗಳಲ್ಲಿ ಮುಚ್ಚಲಾಗಿದೆ ಎನ್ನಲಾಗುವ ಕಂಪನಿಗಳು/ ರೋಗಗ್ರಸ್ತ ಘಟಕಗಳು ಹಾಗೂ ಅಕ್ರಮ ಪ್ರಯೋಗಾಲಯಗಳು ಅಕ್ರಮ ಮಾದಕ ವಸ್ತು ಉತ್ಪಾದನೆ/ ಪೂರೈಕೆ ಮಾಡುತ್ತಿಲ್ಲವೆಂಬ ಬಗ್ಗೆ ಮತ್ತು ಅವುಗಳ ಬ್ಯಾಂಕ್ ಖಾತೆಗಳು ಸಂಪೂರ್ಣವಾಗಿ ಮುಚ್ಚಲಾಗಿದೆಯೇ ಹಾಗೂ ಆ ಘಟಕಗಳನ್ನು ಸೀಲ್ ಮಾಡಲಾಗಿದೆಯೇ ಎಂಬ ಬಗ್ಗೆ ಭೌತಿಕವಾಗಿ ಪರಿಶೀಲಿಸಿ, ಈವರೆವಿಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವುದು.

(ಕ್ರಮ: ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ)

14. ವ್ಯಸನಮುಕ್ತ ಕೇಂದ್ರಗಳನ್ನು ತೆರೆಯುವ ಬಗ್ಗೆ ಹಾಗೂ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸುವ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಕ್ರಮ ಕೈಗೊಳ್ಳುವುದು ಹಾಗೂ ಮಧ್ಯವ್ಯಸನ ಮುಕ್ತ ಕೇಂದ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರದ ಪೋರ್ಟಲ್ ನಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

(ಕ್ರಮ: ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

15. ಕಾರಾಗೃಹಗಳಲ್ಲಿ ವ್ಯಸನ ಮುಕ್ತ ಕೇಂದ್ರಗಳನ್ನು ತೆರೆಯುವ ಕುರಿತು ಡಾ. ರಜನೀ, ಉಪ ನಿರ್ದೇಶಕರು, ಮಾನಸಿಕ ಆರೋಗ್ಯ ಮತ್ತು ನಿರ್ದೇಶಕರು, ವಿಕಲಚೇತನ ಸಬಲೀಕರಣ ಇಲಾಖೆಯವರೊಂದಿಗೆ ಸಮನ್ವಯ ಸಾಧಿಸಿ ಕೂಡಲೇ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದು.

(ಕ್ರಮ: ಡಿಜಿಪಿ, ಕಾರಾಗೃಹ ಇಲಾಖೆ, ಉಪ ನಿರ್ದೇಶಕರು, ಮಾನಸಿಕ ಆರೋಗ್ಯ ಮತ್ತು ನಿರ್ದೇಶಕರು, ವಿಕಲಚೇತನ ಸಬಲೀಕರಣ ಇಲಾಖೆ)

16. ಮಾದಕ ವ್ಯಸನಿಗಳನ್ನು ಮಾದಕ ವ್ಯಸನದಿಂದ ಹೊರತಂದು ಸಮಾಜಮುಖಿ ಮಾಡಲು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಾಸ್ಟೆಲ್‌ಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ಅಭಿಯಾನ ನಡೆಸುವ ಮೂಲಕ ಜಾಗೃತಿಯನ್ನು ಮೂಡಿಸುವುದು.

(ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ)

17. ಗ್ರಾಮ ಪಂಚಾಯಿತಿಗಳಲ್ಲಿ ಮಾದಕ ವಸ್ತು ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸಲು ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಮಿಷನ್, ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಗ್ರಾಮಗಳಲ್ಲಿ ಮಾದಕ ವಸ್ತುಗಳ ಹಾಗೂ ಅವುಗಳ ಪರಿಣಾಮಗಳ ಬಗ್ಗೆ ಕಾರ್ಯಾಗಾರ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

(ಕ್ರಮ: ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಮಿಷನ್)

18. ಅಕ್ರಮ ಗಾಂಜಾ/ಮಾದಕ ಸಸ್ಯ ಮುಂತಾದವುಗಳನ್ನು ಅರಣ್ಯ ಪ್ರದೇಶದಲ್ಲಿ ಬೆಳೆಯುವ ಹಾಗೂ ಸಂಗ್ರಹಿಸುವುದನ್ನು ತಡೆಗಟ್ಟಲು ಅರಣ್ಯ ಇಲಾಖೆಯು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಂಡು ಪೊಲೀಸ್ ಇಲಾಖೆಯ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವುದು.

(ಕ್ರಮ:ಅ.ಮು.ಕಾ., ಅರಣ್ಯ ಇಲಾಖೆ ಮತ್ತು ಡಿಜಿ&ಐಜಿಪಿ)

19. ಮಾದಕ ವಸ್ತುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯು ಸಮುದಾಯ ಕಾರ್ಯಕ್ರಮದಡಿ ಡ್ರಗ್ ಮೊಬೈಲ್ ಟೆಸ್ಟಿಂಗ್ ಕಿಟ್ ಗಳೊಂದಿಗೆ ತಂಡವನ್ನು ರಚಿಸಿ, ಶಾಲಾ ಕಾಲೇಜುಗಳು ಮತ್ತು ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಡ್ರಗ್ ಟೆಸ್ಟಿಂಗ್‌ಗಳನ್ನು ನಡೆಸುವುದು.

ಜಿಲ್ಲಾ ಆಸ್ಪತ್ರೆಗಳಲ್ಲೂ ಡ್ರಗ್ ತಪಾಸಣೆಗೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಮನೋಚೈತನ್ಯ ಕ್ಲಿನಿಕ್‌ಗಳಲ್ಲಿ ವ್ಯಸನಿಗಳಿಗೆ ತಪಾಸಣೆ ನಡೆಸಲು ಕ್ರಮ ಕೈಗೊಳ್ಳುವುದು.

(ಕ್ರಮ: ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ)

೨೦. ಪರವಾನಗಿ ನೀಡಿರುವ ವ್ಯಸನಮುಕ್ತ ಕೇಂದ್ರಗಳಿಗೆ ದಾಖಲಾಗುವ ಮಾದಕ ವ್ಯಸನಿಗಳು ಹಾಗೂ ಅವರಿಗೆ ನೀಡಲಾಗುವ ಚಿಕಿತ್ಸೆಯ ಕುರಿತು ನಿಗಾವಹಿಸಿ ಕ್ರಮ ತೆಗೆದುಕೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ನಿಮ್ಹಾನ್ಸ್ ಸಹಕಾರದೊಂದಿಗೆ ಸಾಫ್ಟ್‌ವೇರ್/ಅಪ್ಲಿಕೇಶನ್ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

**(ಕ್ರಮ: ಡಿ.ಜಿ.ಪಿ.(ಪಿ.ಸಿ.ಡಬ್ಲ್ಯೂ), ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ನಿಮ್ಹಾನ್ಸ್, ಬೆಂಗಳೂರು)**

21. ಶಾಲಾ ಕಾಲೇಜುಗಳಲ್ಲಿ ನಿಯಮಿತವಾಗಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಕಾರ್ಯಾಗಾರಗಳ/ಜಾಗೃತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಬಗ್ಗೆ ಒಂದು ಕ್ರಿಯಾ ಯೋಜನೆ(SOP)ಯನ್ನು ಸಿದ್ಧಪಡಿಸುವುದು ಹಾಗೂ ಶಾಲಾ ಕಾಲೇಜುಗಳ ಒಳ ಹಾಗೂ ಹೊರ ಆವರಣದಲ್ಲಿ ಮಾದಕವಸ್ತುಗಳ ಬಳಕೆ ಹಾಗೂ ಅದರ ದುಷ್ಪರಿಣಾಮಗಳ ಕುರಿತು ಇವು ಕಾನೂನುಬಾಹಿರ ಹಾಗೂ ಶಿಕ್ಷಾರ್ಹ ಅಪರಾಧವೆಂದು ಸೂಚನಾ/ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಕ್ರಮವಹಿಸುವುದು. ಡಿ.ಜಿ.ಪಿ. (ಸಿ&ಎನ್) ರವರು ಫಲಕಗಳ ನಿರ್ದಿಷ್ಟತೆಯನ್ನು ನಿಗಧಿಪಡಿಸಿ ನೀಡುವುದು ಹಾಗೂ ಈ ವಿಷಯವನ್ನು ಬಜೆಟ್ ಭಾಷಣದಲ್ಲಿ ಸೇರಿಸಲು ಸಹ ಕ್ರಮವಹಿಸುವುದು.

ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ (ಪ್ರೌಢ ಶಿಕ್ಷಣ ಮೇಲ್ಪಟ್ಟು) ಕ್ರಿಯಾ ಯೋಜನೆ (SOP) ಯನ್ವಯ ಮೇಲ್ವಿಚಾರಣೆ ಕಾರ್ಯನಿರ್ವಹಿಸಲು ಕಡ್ಡಾಯವಾಗಿ ಮಾದಕ ವಸ್ತು ವಿರೋಧಿ ಸಮಿತಿಗಳನ್ನು ರಚಿಸುವುದು.

**(ಕ್ರಮ: ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ, ಡಿ.ಜಿ.ಪಿ., (ಸಿ&ಎನ್))**

22. ಮಾದಕ ವಸ್ತುಗಳ ಗುರುತಿಸುವಿಕೆಗೆ ಸಂಬಂಧಿಸಿದಂತೆ ಶ್ವಾನದಳದ ಬಳಕೆಯು ಬೆಂಗಳೂರಿನಲ್ಲಿ ಮಾತ್ರವಿದ್ದು ಇದನ್ನು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಶ್ವಾನ ದಳವನ್ನು ಖರೀದಿಸಿ ಅವುಗಳ ಬಳಕೆಯ ಬಗ್ಗೆ ಕ್ರಮವಹಿಸುವುದು.

**(ಕ್ರಮ: ಅ.ಮು.ಕಾ., ಒಳಾಡಳಿತ ಇಲಾಖೆ ಮತ್ತು ಡಿಜಿ ಮತ್ತು ಐಜಿಪಿ)**

23. NCORD ಸಮಿತಿ ಸದಸ್ಯರು ತಮ್ಮ ಘಟಕಗಳು ಮಾದಕವಸ್ತು ನಿಗ್ರಹಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಕ್ರಿಯಾಯೋಜನೆ (Action Plan) ರೂಪಿಸಿ NCORD ನ ನೋಡಲ್ ಅಧಿಕಾರಿಗೆ ಕಳುಹಿಸಿ ಕ್ರಮ ತೆಗೆದುಕೊಳ್ಳುವುದು.

**(ಕ್ರಮ: ಎಲ್ಲಾ NCORD ಸಮಿತಿ ಸದಸ್ಯರು)**

24 ಮಾದಕವಸ್ತು ನಿಯಂತ್ರಣಕ್ಕೆ ಪೊಲೀಸ್ ಇಲಾಖೆಯಲ್ಲಿ ರೂಪಿಸಿರುವ ಮಾರ್ಗಸೂಚಿಗಳಂತೆ ಅದೇ ರೀತಿ ಎಲ್ಲಾ ಇಲಾಖೆಗಳಲ್ಲಿಯೂ ಮಾರ್ಗಸೂಚಿ/ಕ್ರಿಯಾ ಯೋಜನೆ ಸಿದ್ಧಪಡಿಸಿ ಪ್ರಕಟಿಸುವುದು. ಇದಕ್ಕೆ ಅಗತ್ಯ ನೆರವನ್ನು ಡಿ.ಜಿ.ಪಿ. (ಸಿ&ಎನ್) ರವರು ಒದಗಿಸುವುದು.

(ಕ್ರಮ: ಎಲ್ಲಾ ಇಲಾಖಾ ಮುಖ್ಯಸ್ಥರು)

ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕಡತ ಸಂಖ್ಯೆ: ಒಇ 476 ಪಿಪಿಇ 2024

(ಡಾ.ಶಾಲಿನಿ ರಜನೀಶ್)
ಮುಖ್ಯ ಕಾರ್ಯದರ್ಶಿ